<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ತರೀಕೆರೆ</u>

<u>ಸಿ.ಸಿ.ನಂ.981/2023</u>

ಚಾಸಾ:6 ಪ್ರಾಸಾ: 4

ದಿನಾಂಕಃ 25.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು– ಹೆಚ್.ಪಿ. ಸಂತೋಷ್

ತಂದೆಯ ಹೆಸರು– ಲೇ. ಎಲ್.ಪುಟ್ಟಸ್ವಾಮಿ

ವಯಸ್ಸು – 48 ವರ್ಷ

ಉದ್ಯೋಗ– ಪಿ.ಎಸ್.ಐ. ಸರ್ಜಾಪುರ ಪೋಲೀಸ್ ಠಾಣೆ

ವಾಸ– ಆನೇಕಲ್

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

1. ನಾನು ಅಕ್ಟೋಬರ್ 2021 ರಿಂದ ಅಕ್ಟೋಬರ್ 2025 ರವರೆಗೆ ಚಿಕ್ಕಮಗಳೂರು ಉಪವಿಭಾಗದ ಅಬಕಾರಿ ಉಪ ಅಧೀಕ್ಷಕರ ಕಛೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ **01.04.2023** ನಾನು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸ–**4** ರವರಿಂದ ಪಡೆದುಕೊಂಡು ಅದನ್ನು ಪರಿಶೀಲಿಸಿರುತ್ತೇನೆ.

3. ನಂತರ ದಿನಾಂಕ **03.04.2023** ರಂದು ನಾನು ಚಾಸಾ–**1** ರಿಂದ **3** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

4. ನಂತರ ದಿನಾಂಕ **19.04.2023** ರಂದು ಅಮಾನತ್ತು ಪಡಿಸಿಕೊಂಡ ಮದ್ಯದ ಪ್ಯಾಕೆಟ್ ಗಳಲ್ಲಿ ಪ್ರತ್ಯೇಕಿಸಿದ ಪ್ಯಾಕೆಟ್ ಗಳನ್ನು ನಾನು ಚಾಸಾ–**5** ರವರ ಮೂಲಕ ಎಫ್.ಎಸ್.ಎಲ್. ಗೆ ಕಳುಹಿಸಿಕೊಟ್ಟಿರುತ್ತೇನೆ.

5. ನಂತರ ದಿನಾಂಕ **24.05.2023** ರಂದು ನಾನು ತರೀಕೆರೆ ತಾಲ್ಲೂಕಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ವಾಹನದ ಮಾಲೀಕತ್ವದ ಬಗ್ಗೆ ಮಾಹಿತಿಯನ್ನು ಕೋರಿರುತ್ತೇನೆ.

6. ನಂತರ ಅದೇ ದಿನ ತರೀಕೆರೆ ತಾಲ್ಲೂಕಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಾಹನವು 1 ನೇ ಆರೋಪಿಯ ಮಾಲೀಕತ್ವದಲ್ಲಿ ಇರುತ್ತದೆ ಎಂದು ಮಾಹಿತಿಯನ್ನು ನೀಡಿ ವರದಿ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

7. ನಂತರ ದಿನಾಂಕ **14.06.2023** ರಂದು ನಾನು ಎಫ್.ಎಸ್.ಎಲ್. ನಿಂದ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

8. ನಂತರ ಪ್ರಕರಣದ ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಯಾದಾರಗಳು ಕಂಡುಬಂದಿದ್ದರಿಂದ ನಾನು ಆತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

9. ಈಗ ನನಗೆ ತೋರಿಸಿದ ದಾಖಲೆಯು ನಾನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಬರೆದ ಪತ್ರ ಆಗಿದ್ದು ಅದನ್ನು ಈಗ ನಿಪಿ–7 ಎಂದು ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ–7(ಎ) ಎಂದು ಗುರುತಿಸಲಾಯಿತು.

10. ಈಗ ನನಗೆ ತೋರಿಸಿದ ದಾಖಲೆಯು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿದ ಮಾಹಿತಿ ಪತ್ರ ಆಗಿದ್ದು ಅದನ್ನು ಈಗ ನಿಪಿ–8 ಎಂದು ಗುರುತಿಸಲಾಯಿತು.

11. ಈಗ ನನಗೆ ತೋರಿಸಿದ ದಾಖಲೆಯು ನಾನು ಎಫ್.ಎಸ್.ಎಲ್. ನಿಂದ ಸ್ವೀಕರಿಸಿದ ವರದಿ ಆಗಿದ್ದು ಅದನ್ನು ಈಗ ನಿಪಿ–8 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು.

12. ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮದ್ಯದ ಪ್ಯಾಕೆಟ್ ಗಳು ಚಾಸಾ–3 ರವರು ನನಗೆ ಹಸ್ತಾಂತರಿಸಿದ ಪ್ಯಾಕೆಟ್ ಗಳು ಆಗಿರುತ್ತವೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಟಿ.ಜಿ.ಉ. ವಕೀಲರಿಂದಃ**

ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ನಡೆಸಿರುವುದಿಲ್ಲ ಮತ್ತು ಎಫ್ ಎಸ್. ಎಲ್ ನಿಂದ ಸುಳ್ಳು ವರದಿ ಪಡೆದುಕೊಂಡು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಹಿ/–

(ಮುಜಫರ್)

ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ

ತರೀಕೆರೆ